53

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಪಿ.ಹೆಚ್. ಪೂಜಾರ ಇವರು ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿರುವ ವಿಷಯಕ್ಕೆ ಸಂಬಂಧಿಸಿದಂತೆ ಇಂಧನ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರ ಹೇಳಿಕೆ.**

**ವಿಷಯ:**

ದಿನಾಂಕ: 11.03.2025 ರಂದು ಕನ್ನಡ ದಿನಪತ್ರಿಕೆಯೊಂದರಲ್ಲಿ ಪ್ರಕಟಣೆಗೊಂಡಿರುವ "ರನ್ನ ಸಂಶೋಧನೆ ಕೇಂದ್ರಕ್ಕೆ ಗರ" ಎಂಬ ವಿಶೇಷ ಶೀರ್ಷಿಕೆಯಡಿ ವರದಿಯಾಗಿರುವುದನ್ನು ಶೂನ್ಯವೇಳೆಯಲ್ಲಿ ವಿಷಯ ಪ್ರಸ್ತಾಪಿಸಲು ಅವಕಾಶ ನೀಡಬೇಕೆಂದು ಕೋರುತ್ತೇನೆ.

ಇತ್ತೀಚೆಗಷ್ಟೇ 6ನೇ ರನ್ನನ ಸಾಂಸ್ಕೃತಿಕ ವೈಭವ ಭರ್ಜರಿಯಾಗಿ ನಡೆದಿದ್ದು ಜಿಲ್ಲೆಯ ಜನರಿಗೆ ಅತ್ಯಂತ ಸಂತೋಷ ತಂದಿರುವುದು ಸರಿಯಷ್ಟೆ ಆದರೆ, 16 ವರ್ಷಗಳೇ ಕಳೆದರೂ ರನ್ನ ಸಂಶೋಧನೆ ಕೇಂದ್ರ ಮಾತ್ರ ಸಕ್ರೀಯವಾಗುತ್ತಿಲ್ಲ ಎಂಬುದು ಜನರಿಗೆ ಅಸಮಾಧಾನ ತಂದಿದೆ. ಹೌದು 2009ರಲ್ಲೇ ಇಲ್ಲಿನ ರನ್ನ ಗ್ರಂಥಾಲಯದಲ್ಲಿ ರನ್ನ ಸಂಶೋಧನಾ ಕೇಂದ್ರದ ಬೋರ್ಡ್ ನೇತು ಹಾಕಲಾಗಿದೆ. ಆದರೆ, ಸಂಶೋಧನಾ ಕೇಂದ್ರ ಚಟುವಟಿಕೆಗಳಿಗೆ ಅವಕಾಶ ಇಲ್ಲದೇ ಇರುವುದು ವರದಿಯಾಗಿದೆ.

ಕವಿ ಚಕ್ರವರ್ತಿ ರನ್ನನ ಬಗ್ಗೆ ಇರುವ ದಾಖಲೆಗಳ ಕುರಿತು ಸಂಗ್ರಹಣೆ ಹಾಗೂ ಅವುಗಳ ಸಂಗ್ರಹಣೆಗೆ ಮ್ಯೂಜಿಯಂ ಕಾರ್ಯಗಳು ನಡೆಯುತ್ತಿಲ್ಲ, ಸಂಶೋಧನೆ ಕೇಂದ್ರದ ಮೂಲಕ ರನ್ನನ ಕೃತಿಗಳನ್ನು ಪ್ರಕಟಿಸಿ ಜನರಿಗೆ ಮುಟ್ಟಿಸುವ ಕೆಲಸ ಆಗುತ್ತಿಲ್ಲ. ಈ ಕಾರ್ಯವನ್ನು ರಾಜ್ಯ ಸರ್ಕಾರ ಮಾಡಬೇಕಾಗಿದೆ ಅತ್ಯಗತ್ಯವಾಗಿದೆ. ಕವಿಯ 5 ಕೃತಿಗಳು ಹಳಗನ್ನಡದಿಂದ ಕನ್ನಡಕ್ಕೆ ಭಾಷಾಂತರಗೊಳಿಸಬೇಕಿದೆ. ರನ್ನನ ಬಗ್ಗೆ ಸ್ಪಷ್ಟವಾಗಿರುವ ಸಂಶೋಧನೆಗಳು ನಡೆಯಬೇಕಿದೆ. ಆದರೆ, ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ ಮಾತ್ರ ಈ ಕುರಿತು ಗಮನ ಹರಿಸುತ್ತಿಲ್ಲ ಎಂಬ ದೂರುಗಳಿವೆ

ಕವಿ ರನ್ನನ ಕೆಲ ಹಳಗನ್ನಡದ ಗ್ರಂಥಗಳು ಕನ್ನಡಕ್ಕೆ ಭಾಷಾಂತರಿಸುವ ಅಗತ್ಯವಿದ್ದು ಕವಿಗಳು, ಬರಹಗಾರರು ಮತ್ತು ಸಂಶೋಧಕರಿಗೆ ಈ ಕಾರ್ಯ ಒದಗಿಸಿದರೆ ಭಾಷಾಂತರಕ್ಕೆ ಚಾಲನೆ ದೊರೆಯಲಿದೆ. ಮುದೋಳದಲ್ಲಿನ ಗ್ರಂಥಾಲಯದಲ್ಲಿ ರನ್ನನ ಕಾವ್ಯ ಗದಾಯುದ್ಧ ಕುರಿತು ಎರಡು ಕೃತಿಗಳು ಮಾತ್ರ ಇವೆ. ರನ್ನನ ಜೀವನ ಸಾಹಿತ್ಯದ ಕುರಿತು ಬರಹಗಾರರು, ಲೇಖಕರು ತಮ್ಮ ಕೃತಿಗಳನ್ನು ಗ್ರಂಥಾಲಯಕ್ಕೆ ಒದಗಿಸಬೇಕಾಗಿದ ಅನಿವಾರ್ಯವಿದೆ.

ರನ್ನನ ಕುರಿತು ಮುದೋಳ, ಬೆಳಗಲಿ ಸೇರಿದಂತೆ ರಾಜ್ಯದ ಇತರೆ ಜಿಲ್ಲೆಗಳಲ್ಲಿರುವ ಮಾಹಿತಿ ಮತ್ತು ಸಾಹಿತ್ಯ ಸಂಗ್ರಹಕ್ಕೆ ಜಿಲ್ಲಾಡಳಿತ ನಿರ್ದೇಶನ ನೀಡಬೇಕು ಸಂಶೋಧನಾ ವಿದ್ಯಾರ್ಥಿಗಳಿಗೆ ರನ್ನನ ಸಾಹಿತ್ಯದ ಕುರಿತು ಸಂವಾದಗಳನ್ನು ಏರ್ಪಡಿಸಬೇಕು. ಇತ್ತೀಚೆಗೆ ಬೆಳಗಲಿ ಹಾಗೂ ಮುದೋಳದಲ್ಲಿ ರನ್ನ ವೈಭವ-2025 ಎಂಬ ಅತ್ಯದ್ಭುತ ಕಾರ್ಯಕ್ರಮ ಆಯೋಜನೆಯಲ್ಲಿ ಸ್ಥಳೀಯ ಹಾಗೂ ನಾಡಿನ ಹಿರಿಯ, ಕಿರಿಯ ಸಾಹಿತಿಗಳು, ಲೇಖಕರು, ಸಂಶೋಧಕರು ರನ್ನನ ಕೃತಿಗಳ ಬಗ್ಗೆ ಚರ್ಚೆಯಲ್ಲಿ ಭಾಗವಹಿಸಿ ಇನ್ನು ಹೆಚ್ಚಿನ ಸಂಶೋಧನೆ ಕಾರ್ಯಗಳು ಆಗಬೇಕೆಂದು ಒತ್ತಾಯಿಸಿದ್ದಾರೆ.

ಈ ನಿಟ್ಟಿನಲ್ಲಿ ರತ್ನತ್ರಯದಲ್ಲಿ ಒಬ್ಬರಾದ ರನ್ನನ ಸಾಹಿತ್ಯ ಜೀವನದ ಕುರಿತು ಕೃತಿಗಳು ಸಂಗ್ರಹ, ಭಾಷಾಂತರ ಅಂತಹ ಮಹತ್ವದ ಕಾರ್ಯಗಳನ್ನು ಪೂರ್ಣಗೊಳಿಸಲು ರಾಜ್ಯ ಸರ್ಕಾರ ಮುಂದಾಗಬೇಕು ಎಂದು ಶೂನ್ಯವೇಳೆಯಲ್ಲಿ ಒತ್ತಾಯಿಸುತ್ತೇನೆ.

**ಉತ್ತರ:**

ರನ್ನ ಸಂಶೋಧನಾ ಕೇಂದ್ರವು ಒಂದು ಖಾಸಗಿ ಕೇಂದ್ರವಾಗಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವುದಿಲ್ಲ

...2

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲ್ಲೂಕಿನಲ್ಲಿ ರನ್ನ ಪ್ರತಿಷ್ಠಾನ ಸಂಶೋಧನಾ ಕೇಂದ್ರವನ್ನು ವಾರ್ಡ್ ನಂ. 23ರಲ್ಲಿ ಸೈಟ್ ನಂ.2260ರಲ್ಲಿ 61 ಚ. ಮೀಟರ್ ಮತ್ತು 2661/ಎ ರಲ್ಲಿ 1842.63 ಚ.ಮೀಟರ್ ನಿವೇಶನವನ್ನು ಮುಖ್ಯ ಗ್ರಂಥಾಲಯ ಅಧಿಕಾರಿಗಳು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಜಿಲ್ಲಾ ಕೇಂದ್ರ ಗ್ರಂಥಾಲಯ ನವನಗರ, ಬಾಗಲಕೋಟೆ ರವರಿಗೆ ದಾನಪತ್ರದ ಮೂಲಕ ಹಸ್ತಾಂತರಿಸಲಾಗಿದೆ.

ಗ್ರಂಥಾಲಯ ಇಲಾಖೆಯಿಂದ ಅಖಿಲ ಭಾರತೀಯ 64ನೇ ಕನ್ನಡ ಸಾಹಿತ್ಯ ಸಮ್ಮೇಳದ ಮತ್ತು ಕವಿರತ್ನ ರನ್ನ ಸಾಹಿತ್ಯ ಪ್ರತಿಷ್ಠಾನ, ಮುಧೋಳ ಇವರ ಕಾರ್ಯಕಾರಿ ಸಮಿತಿಯ ದಿನಾಂಕ: 24-07-2006 ರಂದು ನಡೆದ ಸಭೆಯ ನಡವಳಿಯಲ್ಲಿ ಕವಿಚಕ್ರವರ್ತಿ ರನ್ನ ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರ ಸ್ಥಾಪಿಸುವ ಕುರಿತು ಪ್ರತಿಷ್ಠಾನದವರೇ ನಿರ್ಣಯ ಕೈಗೊಂಡು, ಇಲಾಖೆಗೆ ನಿವೇಶನವನ್ನು ಹಸ್ತಾಂತರ ಮಾಡಿರುವವರು. ಹಾಗೂ ರನ್ನ ಪ್ರತಿಷ್ಠಾನದ ವತಿಯಿಂದ ರೂ.60.00 ಲಕ್ಷ ಕಟ್ಟಡಕ್ಕಾಗಿ ಬಿಡುಗಡೆಗೊಳಿಸಿರುವರು ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆಯ ವತಿಯಿಂದ ರೂ.50.00 ಲಕ್ಷ ಬಿಡುಗಡೆಯಾಗಿರುವುದು.

ಕವಿ ಚಕ್ರವರ್ತಿ ರನ್ನ ಗ್ರಂಥಾಲಯ ಮತ್ತು ಸಂಶೋಧನಾ ಕೇಂದ್ರ ಮುಧೋಳ ಇಲ್ಲಿನ ಮೊದಲನೆ ಮಹಡಿಯಲ್ಲಿ ಗ್ರಂಥಾಲಯವು ಕಾರ್ಯನಿರ್ವಹಿಸುತ್ತಿದೆ. ನೆಲಮಹಡಿಯಲ್ಲಿ ಸಭಾ ಭವನ ಇದ್ದು ಈ ಭವನದಲ್ಲಿ, ಚಿಕ್ಕ ಸಭೆ ಸಮಾರಂಭಗಳನ್ನು ನಡೆಸಲು ಪ್ರಾಶಸ್ತ್ಯವಾಗಿದೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಕನ್ನಡ ಸಾಹಿತ್ಯದಲ್ಲಿ ಅಜರಾಮರ ಸ್ಥಾನಗಳಿಸಿರುವ ಕವಿ ಚಕ್ರವರ್ತಿ ರನ್ನನ ಕುರಿತು ಸರ್ಕಾರವು "ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನ"ವನ್ನು 2010ರಲ್ಲಿ ಬಾಗಲಕೋಟೆ ಜಿಲ್ಲೆಯ ಮುಧೋಳದಲ್ಲಿ ಸ್ಥಾಪಿಸಲಾಗಿದೆ. ಪ್ರತಿ ವರ್ಷ ಇಲಾಖೆಯವತಿಯಿಂದ ಪ್ರತಿಷ್ಠಾನದ ಚಟುವಟಿಕೆಗಳಿಗೆ ಅನುದಾನವನ್ನು ಬಿಡುಗಡೆ ಮಾಡಲಾಗುತ್ತಿದೆ.

ಸದರಿ ಪ್ರತಿಷ್ಠಾನದಿಂದ ರನ್ನನ ಜೀವನ, ಸಾಹಿತ್ಯ, ಸಂಶೋಧನೆ, ಕಮ್ಮಟಗಳು ಮತ್ತು ಸಂವಾದ ಕಾರ್ಯಕ್ರಮಗಳನ್ನು ಅಜಿತನಾಥ ಪುರಾಣ, ತಿಲಕ ದೀಪಿಕೆ, ಶ್ರೀ ಕವಿರತ್ನ ಸಂಪುಟಗಳು ಹಾಗೂ ಕವಿಕುಲ ತಿಲಕ, ಕಾವ್ಯತೇಜ ಎಂಬ ಕವನ ಸಂಕಲನ ಮತ್ತು ಶ್ರೀಮುಕುಟ ಎಂಬ ಸ್ಮರಣ ಸಂಚಿಕೆಯನ್ನು ಪ್ರತಿಷ್ಠಾನದಿಂದ ಪ್ರಕಟಿಸಲಾಗಿದೆ.

ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನ, ವತಿಯಿಂದ ನವದೆಹಲಿಯ ಜವಹರಲಾಲ್ ನೆಹರೂ ವಿಶ್ವವಿದ್ಯಾಲಯದ ಸಹಯೋಗದೊಂದಿಗೆ ರನ್ನನ ಗದಾಯುದ್ಧದ ಕೃತಿಯನ್ನು ಆಂಗ್ಲ ಭಾಷೆಗೆ ಅನುವಾದಿಸಲಾಗಿದೆ. ಕನ್ನಡ ಭಾಷಾ ಶಿಕ್ಷಕರಿಗಾಗಿ ಹಳಗನ್ನಡ ತರಬೇತಿ ಶಿಬಿರ ಹಾಗೂ ಹಳಗನ್ನಡ ಕಾವ್ಯ ಸಂಚಾರ ಓದು, ವಿಚಾರ ಸಂಕಿರಣ, ಉಪನ್ಯಾಸಗಳನ್ನು ಪ್ರತಿಷ್ಠಾನದ ವತಿಯಿಂದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಕವಿ ಚಕ್ರವರ್ತಿ ರನ್ನ ಪ್ರತಿಷ್ಠಾನ, ಜಿಲ್ಲಾಡಳಿತ ಮತ್ತು ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬೆಂಗಳೂರು ಇವರ ಸಹಯೋಗದಲ್ಲಿ ದಿನಾಂಕ:22, 23 ಮತ್ತು 24 ಫೆಬ್ರುವರಿ -2025ರಂದು ಕವಿಗೋಷ್ಠಿ, ವಿಚಾರ ಸಂಕಿರಣ, ಉಪನ್ಯಾಸ, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ರನ್ನ ವೈಭವ ಉತ್ಸವವನ್ನು ಏರ್ಪಡಿಸಲಾಗಿದೆ.

ರನ್ನ ಪ್ರತಿಷ್ಠಾನ ವತಿಯಿಂದ ಹಳೆಗನ್ನಡ ಸಾಹಿತ್ಯ ಹಾಗೂ ಕನ್ನಡ ಭಾಷೆ ಮತ್ತಿತರ ಸಂಶೋಧನೆಗಳಲ್ಲಿ ಅವಿರತವಾಗಿ ಸೇವೆ ಸಲ್ಲಿಸಿದ ಮಹನೀಯರನ್ನು ಗುರುತಿಸಿ ರನ್ನ ಹಳೆಗನ್ನಡ ಪ್ರಶಸ್ತಿಯನ್ನು ಪ್ರದಾನ ಮಾಡಲಾಗುತ್ತಿದೆ. ಪ್ರಸಕ್ತ ವರ್ಷದಲ್ಲಿ ಡಾ.ಶಾಂತಿನಾಥ ದಿಬ್ಬದ ಹಾಗೂ ಶ್ರೀ ಶಂಕರಯ್ಯ ಉಕ್ಕಲಿ ಅವರಿಗೆ ಪ್ರಶಸ್ತಿಯನ್ನು ಪ್ರದಾನ ಮಾಡಲಾಗಿದೆ.

ಸಂಖ್ಯೆ: ಕಸಂವಾ 30 ಕವಿಸ 2025.

**(ಶಿವರಾಜ ಎಸ್. ತಂಗಡಗಿ)**
ಹಿಂದುಳಿದ ವರ್ಗಗಳ ಕಲ್ಯಾಣ ಹಾಗೂ
ಕನ್ನಡ ಮತ್ತು ಸಂಸ್ಕೃತಿ ಸಚಿವರು.